# ಅಪರ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ, ಗದಗ

**ಸ್ಪೇಷಲ್ ಕೇಸ್ ನಂ.51/2025**

**ಸಿಡಬ್ಲ್ಯೂ 1/ಪಿಡಬ್ಲ್ಯೂ 1**

**ದಿನಾಂಕಃ** 07.01.2026

**ಪ್ರಮಾಣವಚನ ಬೋಧಿಸಲಾಯಿತು.**

ಸಾಕ್ಷಿದಾರನ/ಳ ಹೆಸರು – ಶ್ರೀ ದೇವೇಂದ್ರಪ್ಪ ಹಾಲವರ

ತಂದೆಯ / ಗಂಡನ ಹೆಸರು – ಶ್ರೀ ಕಲ್ಲಪ್ಪ

ವಯಸ್ಸು – 57 ವರ್ಷ

ಉದ್ಯೋಗ – ಎಎಸ್ಐ, ನರಗುಂದ ಪೊಲೀಸ ಠಾಣೆ

ವಾಸಸ್ಥಳ – ನರಗುಂದ

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

1. ನಾನು 2020 ರಿಂದ ಎಎಸ್ಐ ಎಂದು ನರಗುಂದ ಪೊಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ30.07.2022 ರಂದು ಮಧ್ಯಾಹ್ನ 3.00 ಘಂಟೆಗೆ ಚಾಸಾಃ 4 ಮತ್ತು ಚಾಸಾಃ5 ರವರ ಜೊತೆ ಗಸ್ತು ಕರ್ತವ್ಯಕ್ಕೆ ನರಗುಂದ ಶಹರದಿಂದ ಕೊಣ್ಣೂರ ಕಡೆಗೆ ಹೋಗುತ್ತಿರುವಾಗ, ರೋಣ ಕ್ರಾಸ ಹತ್ತಿರ 2 ಜನ ನಮ್ಮನ್ನು ನೋಡಿ ಗಲಿಬಿಲಿಗೊಂಡು ಓಡಲು ಪ್ರಾರಂಭಿಸಿದರು. ಅವರಲ್ಲಿ ಒಬ್ಬನ ಕೈಯಲ್ಲಿ ಒಂದು ಬಿಳಿ ಪ್ಲಾಸ್ಟಿಕ ಚೀಲ ಇತ್ತು. ಆಗ ನಾವು ವಾಹನವನ್ನು ನಿಲ್ಲಿಸಿ, ಇಬ್ಬರನ್ನು ಹಿಂಬಾಲಿಸಿ, ಹಿಡಿದು ವಿಚಾರಣೆ ಮಾಡಿದಾಗ 1 ನೇ ಆರೋಪಿತನನ್ನು ಬಿಳಿ ಪ್ಲಾಸ್ಟಿಕ ಚೀಲದಲ್ಲಿ ಏನಿದೆ ಎಂದು ಕೇಳಿದಾಗ ಅವರು ಪ್ಲಾಸ್ಟಿಕ ಚೀಲವನ್ನು ತೆಗೆದು ತೋರಿಸಿದರು. ಅದರಲ್ಲಿ ಹಸಿ ಕಾಂಡ ಹೂವು ಇತ್ತು. ಅದರಿಂದ ಘಾಟು ವಾಸನೆ ಬರುತ್ತಿತ್ತು. ಅವರಿಬ್ಬರನ್ನೂ ವಿಚಾರಿಸಿದಾಗ ಒಬ್ಬನು ತನ್ನ ಹೆಸರನ್ನು ಬಾಲಪ್ಪ ತಂದೆ ಹನಮಪ್ಪ ಯರಗೊಪ್ಪ, ಇನ್ನೊಬ್ಬ ತನ್ನ ಹೆಸರನ್ನು ಶರಣಪ್ಪ ಮಲ್ಲಪ್ಪ ಕೆಂಪೋಡಿ ಎಂದು ಹೇಳಿದರು. ಈಗ ನ್ಯಾಯಾಲಯದ ಮುಂದಿರುವ ಆರೋಪಿತರು ಅವರೇ ಆಗಿರುತ್ತಾರೆ. ಸದರಿ ವಸ್ತುವನ್ನು ಎಲ್ಲಿಂದ ತಂದಿರುವಿರಿ ಎಂದು ಕೇಳಿದಾಗ ಅವರು ಮೆಣಸಗಿ ಗ್ರಾಮದ 2 ನೇ ಆರೋಪಿಯ ಹೊಲದಲ್ಲಿ ಬೆಳೆದು ಮಾರಾಟಕ್ಕಾಗಿ ನರಗುಂದ ಶಹರಕ್ಕೆ ತೆಗೆದುಕೊಂಡು ಹೋಗುತ್ತಿದ್ದೇವೆ ಎಂದು ಹೇಳಿದರು. ಈ ವಿಷಯವನ್ನು ನಮ್ಮ ಠಾಣೆಯ ಎಸ್

ಎಸ್ ಓ ರವರಿಗೆ ಫೋನ್ ಮೂಲಕ ಹೇಳಿ ಮತ್ತು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿದೆವು.

3. ಅದೇ ಸ್ಥಳದಲ್ಲಿ 1 ನೇ ಆರೋಪಿ ಮತ್ತು 2 ನೇ ಆರೋಪಿ ಮೇಲೆ ಒಂದು ಫಿರ್ಯಾದಿಯನ್ನು ಬರೆದು ಅದನ್ನು ನಮ್ಮ ಮೇಲಾಧಿಕಾರಿಗಳಿಗೆ ಕಳಿಸಿಕೊಟ್ಟೆನು. ನಾನು ಮತ್ತು ನಮ್ಮ ಸಿಬ್ಬಂದಿ ಅಲ್ಲಿಯೇ ಉಳಿದೆವು. ಈಗ ನನಗೆ ತೋರಿಸಿದ ದಾಖಲೆ ನಾನು ಬರೆಸಿದ ಫಿರ್ಯಾದಿಯಾಗಿರುತ್ತದೆ. ಸಾಕ್ಷಿಯು ದಾಖಲೆಯನ್ನು ಗುರುತಿಸಿದ್ದರಿಂದ, ಸದರಿ ಫಿರ್ಯಾದಿಯನ್ನು **ನಿಪಿ:1** ಎಂದು, ಸಾಕ್ಷಿಯ ಸಹಿಯನ್ನು **ನಿಪಿ:1(ಎ)** ಎಂದು ಗುರುತಿಸಲಾಯಿತು.

4. ನಂತರ ಮಧ್ಯಾಹ್ನ 3.00 ಘಂಟೆ ಸುಮಾರಿಗೆ ನಮ್ಮ ಮೇಲಾಧಿಕಾರಿಯಾದ ಶ್ರೀ ಮಲ್ಲಯ್ಯ ಮಠಪತಿ ಚಾಸಾ:17, ಶ್ರೀ ಎ ಡಿ ಅಮರಾವದಗಿ ತಹಶೀಲ್ದಾರ ಚಾಸಾ: 16 ರವರ ಜೊತೆಗೆ ಚಾಸಾ: 6, ಚಾಸಾ:9, ಚಾಸಾ:8 ಚಾಸಾ:16 ಮತ್ತು ಇಬ್ಬರು ಪಂಚರನ್ನು ಕರೆದುಕೊಂಡು ಎರಡು ಸರ್ಕಾರಿ ಜೀಪಗಳಲ್ಲಿ ರೋಣ ಕ್ರಾಸಗೆ ಬಂದು, ನನ್ನ ವಿಚಾರಿಸಿದರು. ಆಗ ನಾನು ಆರೋಪಿತರು ಬಿಳಿ ಚೀಲದಲ್ಲಿ ಇರುವ ವಸ್ತುವಿನ ಬಗ್ಗೆ ಹೇಳಿದೆನು. ಆಗ ಅವರು ಆರೋಪಿತರನ್ನು ವಿಚಾರಿಸಿದರು. ಆರೋಪಿತರಿಗೆ ಸದರಿ ವಸ್ತುವನ್ನು ಮಾರಾಟ ಮಾಡಲು ಅಥವಾ ಇಟ್ಟುಕೊಳ್ಳಲು ಪಾಸ್ ಅಥವಾ ಪರ್ಮಿಟ ಇದೆಯೇ ಎಂದು ಕೇಳಿದರು. ಆರೋಪಿತರು ಪಾಸ್ ವ ಪರ್ಮಿಟ ಇಲ್ಲವೆಂದು ಹೇಳಿದರು.

5. ನಮ್ಮ ಮೇಲಾಧಿಕಾರಿಯವರು ಆರೋಪಿತರಿಗೆ ಅಂಗ ಶೋಧನೆಯನ್ನು ಪತ್ರಾಂಕಿತ ಅಧಿಕಾರಿಯ ಮುಂದೆ ಮಾಡಬೇಕೇ ಅಥವಾ ನ್ಯಾಯಾಧೀಶರ ಮುಂದೆ ಮಾಡಬೇಕೆ ಎಂದು ಪ್ರಶ್ನಾವಳಿ ಮಾಡಿದಾಗ, ಆರೋಪಿತರು ಯಾವುದಾದರೂ ಪತ್ರಾಂಕಿತ ಅಧಿಕಾರಿಯ ಮಂದೆ ಮಾಡಬಹುದು ಎಂದು ನುಡಿದಿದ್ದರಿಂದ, ಚಾಸಾ: 16 ತಹಶೀಲ್ದಾರವರ ಮುಂದೆ ಆರೋಪಿತರ ಅಂಗ ಶೋಧನೆ ಮಾಡಿದರು. 1 ನೇ ಆರೋಪಿಯ ಹತ್ತಿರ 50 ರೂಪಾಯಿ ನೋಟು ಸಿಕ್ಕಿತ್ತು. ಸದರಿ ನೋಟನ್ನು ಒಂದು ಬ್ರೌನ ಕವರನಲ್ಲಿ ಹಾಕಿ, ಅದಕ್ಕೆ ಪಂಚರ ಮುಂದೆ ಸೀಲ್ ಮಾಡಿ, ಜಪ್ತಿ ಮಾಡಿಕೊಂಡರು.

6. ಗಾಂಜಾ ಇರುವ ಚೀಲವನ್ನು ಪಂಚರ ಸಮಕ್ಷಮ ತೂಕ ಮಾಡಿದಾಗ ಅದು 940 ಗ್ರಾಂ ಇತ್ತು. ಹಸಿ ಗಾಂಜಾವನ್ನು ಚೀಲದಿಂದ ಹೊರಗೆ ತೆಗೆದು ತೂಕ ಮಾಡಿದಾಗ ಅದು 800 ಗ್ರಾಂ ಇತ್ತು. ಅದನ್ನು ಬಿಳಿ ಅರಿಬೆಯ ಕವರಿನಲ್ಲಿ ಹಾಕಿ, ಸೀಲ್ ಮಾಡಿದೆವು. ಅದರ ಮೇಲೆ ಪಂಚರು, ಚಾಸಾ: 16 ತಹಶೀಲ್ದಾರವರ ಮತ್ತು ನನ್ನ ಸಹಿಯನ್ನು ಮಾಡಿದೆವು. ಖಾಲಿ ಚೀಲವನ್ನೂ ಸಹ ಪ್ಯಾಕ ಮಾಡಿ, ಸೀಲ್ ಹಾಕಿ ಅದರ ಮೇಲೆ ಕೂಡಾ ಸಹಿಯನ್ನು ಮಾಡಿದೆವು.

7. 2 ನೇ ಆರೋಪಿಯ ಅಂಗ ಶೋಧನೆಯಲ್ಲಿ, 2 ನೇ ಆರೋಪಿಯ ಹತ್ತಿರ 50

ರೂಪಾಯಿ ನೋಟು ಸಿಕ್ಕಿತು. ಸದರಿ ನೋಟನ್ನು ಒಂದು ಬ್ರೌನ ಕವರನಲ್ಲಿ ಹಾಕಿ, ಅದಕ್ಕೆ ಪಂಚರ ಮುಂದೆ ಸೀಲ್ ಮಾಡಿ, ಜಪ್ತಿ ಮಾಡಿಕೊಂಡರು.

8. ಸದರಿ ಸ್ಥಳದಲ್ಲಿ ಪೋಟೊಗಳನ್ನು ತೆಗೆದಿರುತ್ತೇವೆ. ಈಗ ನನಗೆ ತೋರಿಸಿರುವ 4 ಪೋಟೊಗಳು ಅವೇ ಪೋಟೊಗಳಾಗಿರುತ್ತವೆ. ಸದರಿ ನಾಲ್ಕು ಪೋಟೊಗಳನ್ನು **ನಿಪಿಃ 2 ರಿಂದ 5** ಎಂದು ಗುರುತಿಸಲಾಯಿತು.

9. ಅಲ್ಲಿ ಪಂಚನಾಮೆಯನ್ನು ಮಾಡಿದೆವು. ಈಗ ನನಗೆ ತೋರಿಸಿದ ದಾಖಲೆ ಸದರಿ ಸ್ಥಳದಲ್ಲಿ ಮಾಡಿ ರೆಡ್ ಪಂಚನಾಮೆಯಾಗಿರುತ್ತದೆ. ಸದರಿ ಪಂಚನಾಮೆಯನ್ನು ನಿಪಿಃ6 ಎಂದು ಗುರುತಿಸಲಾಯಿತು. ಸುಮಾರು 5 ಘಂಟೆಗೆ ಪಂಚನಾಮೆ ಪ್ರಕ್ರಿಯೆ ಮುಗಿದ ಮೇಲೆ ಪೊಲೀಸ ಠಾಣೆಗೆ ಹೋದೆವು. ಮುಂದಿನ ತನಿಖೆಯನ್ನು ಚಾಸಾಃ17 ರವರಿಗೆ ವಹಿಸಿಕೊಟ್ಟಿರುತ್ತೇನೆ. ಜಪ್ತಿ ಮಾಡಿದ ಚೀಲವನ್ನು ಮತ್ತು ಗಾಂಜಾವನ್ನು ನೋಡಿದರೆ ಗುರುತಿಸುತ್ತೇನೆ.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ, ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೆ ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಗದಗ.